# ಬೆಂಬಲದ ಕಂಬಗಳು

## Pillars of Support

SRDJA POPOVIC, SLOBODAN DJINOVIC, ANDREJ MILIVOJEVIC, HARDY MERRIMAN, AND IVAN MAROVIC

FROM THE BOOK: CANVAS CORE CURRICULUM: A GUIDE TO EFFECTIVE NONVIOLENT STRUGGLE
CENTRE FOR APPLIED NONVIOLENT ACTIONS AND STRATEGIES, 2007
Translation: Ramesh Sharma, April 2018

# TRANSLATOR'S NOTES

Please insert any helpful information about this translation here.

**ಬೆಂಬಲದ ಕಂಬಗಳು**

ಸ್ವತಃ ಆಡಳಿತಗಾರರು ತೆರಿಗೆಗಳನ್ನು ಸಂಗ್ರಹಿಸಲು, ದಮನಕಾರಿ ಕಾನೂನುಗಳು ಮತ್ತು ನಿಯಂತ್ರಣಗಳನ್ನು ಹೇರಲು, ರೈಲುಗಳನ್ನು ಸರಿಯಾದ ಸಮಯಕ್ಕೆ ಓಡುವಂತೆ ಮಾಡುವುದು, ರಾಷ್ಟ್ರೀಯ ಬಜೆಟ್ಗಳ ಸೃಷ್ಟಿ, ಸಾರಿಗೆ ನಿರ್ದೇಶನ, ಬಂದರುಗಳ ನಿರ್ವಹಣೆ, ಹಣ ಮುದ್ರಣ, ರಸ್ತೆಗಳ ರಿಪೇರಿ, ಪೊಲೀಸರು ಮತ್ತು ಸೇನೆಗಳಿಗೆ ತರಬೇತಿ, ಅಂಚೆ ಚೀಟಿಗಳನ್ನು ಮುಂದಿಡುವುದು ಅಥವಾ ದನದ ಹಾಲು ಕರೆಯುವುದೂ ಸಾಧ್ಯವಿಲ್ಲ. ಈ ಸೇವೆಗಳನ್ನು ಜನರು ಆಡಳಿತಗಾರರಿಗೆ ವೈವಿಧ್ಯಮಯ ಸಂಘಟನೆಗಳು ಮತ್ತು ಸಂಸ್ಥೆಗಳ ಮೂಲಕ ಒದಗಿಸುತ್ತಾರೆ. ಮೇಲಿನ ಸ್ಥರದಲ್ಲಿರುವ ಜನರು ಈ ಕೌಶಲ್ಯಗಳು ಮತ್ತು ಸೇವೆಗಳನ್ನು ಒದಗಿಸುತ್ತಿದ್ದರೆ, ಆಡಳಿತಗಾರ ಆಡಳಿತ ನಡೆಸಲು ಸಾಧ್ಯವಿಲ್ಲ. ಒಮ್ಮೆ ಇದು ಸಮಾಜದಲ್ಲಿ ರಾಜಕೀಯ ಶಕ್ತಿಯ ಸಹಜ ಪ್ರಕ್ರಿಯೆ ಎಂದು ಅರಿತುಕೊಂಡಲ್ಲಿ, ನಾವು ಶಕ್ತಿಯನ್ನು ಹೇಗೆ ಚಲಾಯಿಸಬೇಕು ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸಮಾಜದಲ್ಲಿ ಜನರೇಶಕ್ತಿಯ ಪ್ರಮುಖ ಹಿಡಿತದಾರರು, ಆದರೆ ಅವರು ಸಂಘಟನೆಗಳು ಅಥವಾ ಸಂಸ್ಥೆಗಳು, ಅಂದರೆ ಪೊಲೀಸರು, ನಾಗರಿಕ ಸೇವಕರು, ಕಾರ್ಮಿಕ ಸಂಘಟನೆಗಳು, ಉದ್ಯಮಿಗಳ ಸಮೂಹಗಳು ಇತ್ಯಾದಿಯಾಗಿ ಜೊತೆಯಾಗಿ ಕಾರ್ಯನಿರ್ವಹಿಸಿದಾಗಲೇ ಶಕ್ತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸುತ್ತಾರೆ. ಇವುಗಳಲ್ಲಿ ಕೆಲವು ಸಂಘಟನೆಗಳು ನಿಮ್ಮ ವಿರೋಧಿಗಳನ್ನು ಬೆಂಬಲಿಸಬಹುದು ಮತ್ತು ಇತರರು ನಿಮ್ಮ ಚಳವಳಿಯನ್ನು ಬೆಂಬಲಿಸಬಹುದು.

ನಾವು ಈ ಬೆಂಬಲಿಗ ಸಂಘಟನೆಗಳನ್ನು ಬೆಂಬಲದ ಕಂಬಗಳು ಎಂದು ಕರೆಯುತ್ತೇವೆ. ಏಕೆಂದರೆ ಅವರು ಸಮಾಜದ ಶಕ್ತಿಯ ರಚನೆಗೆ ಬಲ ನೀಡುತ್ತಾರೆ. ಅಹಿಂಸಾ ಹೋರಾಟದ ಆರಂಭದಲ್ಲಿ ಹಲವು ಇಂತಹ ಸಂಘಟನೆಗಳು ನಿಮ್ಮ ವಿರೋಧಿಗಳಿಗೆ ಬೆಂಬಲ ನೀಡಬಹುದು. ಈ ಸಂಘಟನೆಗಳು ಮತ್ತು ಸಂಸ್ಥೆಗಳು ನಿಮ್ಮ ವಿರೋಧಿಗಳಿಂದ ಬೆಂಬಲವನ್ನು ಹಿಂತೆಗೆದುಕೊಂಡರೆ (ಕೆಲವು ನಿಮ್ಮ ಚಳವಳಿಯನ್ನು ಸಕ್ರಿಯವಾಗಿ ಬೆಂಬಲಿಸಲು ಆರಂಭಿಸಬಹುದು), ನಿಮ್ಮ ವಿರೋಧಿಗಳು ನಿಯಂತ್ರಣವನ್ನು ನಿಭಾಯಿಸಲು ಸಾಧ್ಯವಾಗದು.

**ಸಲಹೆ**

ಜನರು ತಮ್ಮ ಬೆಂಬಲ ಹಿಂದೆ ಪಡೆದರೆ,
ರಾಜ ಆಡಳಿತ ನಡೆಸಲಾಗದು!

**SPO1:** **ಬೆಂಬಲದ ಕಂಬಗಳನ್ನು ವ್ಯಾಖ್ಯಾಣಿಸಿ.**

ನಮ್ಮ ಉದ್ದೇಶಗಳಿಗೆ, ನಾವು ಬೆಂಬಲದ ಕಂಬಗಳನ್ನು ಈ ರೀತಿಯಾಗಿ ವ್ಯಾಖ್ಯಾನಿಸುತ್ತೇವೆ:

"ಬೆಂಬಲದ ಕಂಬಗಳು ಸಂಸ್ಥೆಗಳು ಮತ್ತು ಸಮಾಜದ ವಿಭಾಗಗಳಾಗಿದ್ದು, ಅವುಗಳು ಈಗಿನ ಪ್ರಭುತ್ವಕ್ಕೆ ನಿರ್ವಹಣೆ ಮತ್ತು ತನ್ನ ಶಕ್ತಿ ಸಾಮರ್ಥ್ಯವನ್ನು ವಿಸ್ತರಿಸಲು ಶಕ್ತಿಯ ಮೂಲವನ್ನು ಸರಬರಾಜು ಮಾಡುತ್ತದೆ."

ಡಾ ಜೀನ್ ಶಾರ್ಪ್, ಅಹಿಂಸಾ ಹೋರಾಟಗಾರ




---

ಪ್ರತಿ ಸಮಾಜದಲ್ಲಿ, ವಿವಿಧ ಬೆಂಬಲದ ಕಂಬಗಳನ್ನು ನಾವು ಗುರುತಿಸಬಹುದು. ಅವರಲ್ಲಿ ಸೇರಿರಬಹುದು: ಪೊಲೀಸರು, ಸೇನೆ, ಆಡಳಿತ ಸಂಸ್ಥೆಗಳಾದ ನ್ಯಾಯಾಂಗ ಮತ್ತು ಚುನಾವಣಾ ಆಯೋಗ, ನಾಗರಿಕ ಸಿಬ್ಬಂದಿಗಳು, ಶೈಕ್ಷಣಿಕ ವ್ಯವಸ್ಥೆ, ವ್ಯವಸ್ಥಿತ ಧಾರ್ಮಿಕ ಸಂಸ್ಥೆಗಳು, ರಾಷ್ಟ್ರ-ನಿಯಂತ್ರಿತ ಮಾಧ್ಯಮ, ಉದ್ಯಮ ಸಮುದಾಯ ಮತ್ತು ಇತರ ಸಂಘಟನೆಗಳು

**ಪ್ರಾಮುಖ್ಯತೆ:**
ಬೆಂಬಲದ ಕಂಬಗಳು ಮತ್ತು ಸಾಮಾಜಿಕ ಕಾರ್ಯಗಳ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳಿ.

ನಾವು 'ಅರ್ಥವ್ಯವಸ್ಥೆ' ಅಥವಾ 'ಧರ್ಮ'ವನ್ನು ಸಾಮಾಜಿಕ ಕಾರ್ಯಗಳೆಂದು ಪಟ್ಟಿ ಮಾಡದೆ ಇರುವುದನ್ನು ದಯವಿಟ್ಟು ಗಮನಿಸಿ. ಬೆಂಬಲದ ಕಂಬಗಳು ಸಾಮಾಜಿಕ ಕಾರ್ಯಗಳನ್ನು ಸೃಷ್ಟಿಸುವ ಮತ್ತು ಕೊಂಡರೆ. ನೀವು ಸಮಾಜ, ಮೇಲೆ ಪ್ರಭಾವ ಬೀರಲು ಬಯಸಿದ್ದಲ್ಲಿ ಈಗಿನ ಅಧಿಕಾರ ರಚನೆ ಮತ್ತು ಸಾಮಾಜಿಕ ಕಾರ್ಯಗಳಿಗೆ ಬೆಂಬಲ ನೀಡುವ ಸಂಸ್ಥೆಗಳು ಮತ್ತು ಸಂಘಟನೆಗಳನ್ನು (ಬೆಂಬಲದ ಕಂಬಗಳು) ಗುರುತಿಸಿ ಮತ್ತು ಅದರ ಮೇಲೆ ನಿಮ್ಮ ಪ್ರಯತ್ನವನ್ನು ಹಾಕಿ.

**SPO 2:** ಹಲವು ಬೆಂಬಲದ ಕಂಬಗಳನ್ನು ದೂರ ಮಾಡುವ ಬದಲಾಗಿ ಕಂಬಗಳನ್ನು ಸೆಳೆಯುವ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು.

ಅಹಿಂಸಾ ಚಳವಳಿಯು ವಿವಿಧ ಬೆಂಬಲದ ಕಂಬಗಳ ನಡುವೆ ಜನರ ನಡವಳಿಕೆಯನ್ನು ಪ್ರಭಾವಿಸಲು ದಾರಿಯನ್ನು ಕಂಡುಕೊಳ್ಳುವುದು ನಿರ್ಣಾಯಕ:

- ನಿಮ್ಮ ವಿರೋಧಿಗಳಿಗೆ ಅವರ ಪ್ರಾಮಾಣಿಕತೆಯನ್ನು ನಿವಾರಿಸುವುದು
- ಅವರ ಕೌಶಲ್ಯಗಳು ಮತ್ತು ಜ್ಞಾನ, ವಿಷಯ ಸಂಪನ್ಮೂಲ ಮತ್ತು ಸಮಯವನ್ನು ನಿಮ್ಮ ವಿರೋಧಿಗಳಿಗೆ ಕಡಿಮೆ ನೀಡುವಂತೆ ಅವರನ್ನು ಒಲಿಸುವುದು.

**ಸಲಹೆ**

ನಿಮ್ಮ ಅಹಿಂಸಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಗುರಿ ಮಾಡಿ: ಪ್ರತೀ ಸ್ವತಂತ್ರ ಕಂಬವನ್ನು "ದೂರ ಮಾಡುವುದು" ಬದಲಾಗಿ "ಸೆಳೆಯಿರಿ".

ಒಂದು ಅಹಿಂಸಾ ಚಳವಳಿಯು ಒಂದು ನಿರ್ದಿಷ್ಟ ಕಂಬವನ್ನು ಪ್ರಭಾವಿಸುವಲ್ಲಿ ಯಶಸ್ವಿಯಾದಾಗ, ಆ ಕಂಬದ ಸದಸ್ಯರು ನಿಮ್ಮ ವಿರೋಧಿಗಳಿಂದ ಮತ್ತು ಆಕೆಯ/ಆತನ ಬೆಂಬಲಿಗರಿಂದ ಬೆಂಬಲವನ್ನು ಹಿಂಪಡೆಯಲು ದಾರಿಗಳನ್ನು ಕಂಡುಕೊಳ್ಳುತ್ತಾರೆ; ಇದು ಬಹಿರಂಗವಾಗಿ ಅಥವಾ ಪರೋಕ್ಷವಾಗಿ ಅವರ ಆದೇಶಗಳನ್ನು ಪಾಲಿಸದೆ ಇರುವ ಮೂಲಕ, ಅಥವಾ ಆದೇಶಗಳನ್ನು ಒಟ್ಟಾರೆಯಾಗಿ ಅಲಕ್ಷಿಸುವ ಮೂಲಕ, ಅಥವಾ ನಿಧಾನವಾಗಿ ಆದೇಶಗಳನ್ನು ಸ್ವೀಕರಿಸುವ ಮೂಲಕ, ಅಸಮರ್ಪಕವಾಗಿ ಮತ್ತು/ಅಥವಾ ಅಪೂರ್ಣವಾಗಿ ಆಗಬಹುದು. ಕೆಲವು ಕಂಬಗಳ ಸದಸ್ಯರು ಬಹಿರಂಗವಾಗಿ ಅಥವಾ ಪರೋಕ್ಷವಾಗಿ ನಿಮ್ಮ ಚಳವಳಿಯನ್ನು ಬೆಂಬಲಿಸಬಹುದು.

ನಿಮ್ಮ ಕಂಬಗಳ ನಡವಳಿಕೆಯನ್ನು ಪ್ರಭಾವಿಸಲು, ಕಂಬಗಳ ಸದಸ್ಯರನ್ನು ನಿಮ್ಮ ಚಳವಳಿಯ ಕಡೆಗೆ ಸೆಳೆಯುವುದು ಮತ್ತು ಅವರನ್ನು ನಿಮ್ಮ ಚಳವಳಿಯಿಂದ ದೂರ ಮಾಡುವ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಅಗತ್ಯ.



ಉದಾಹರಣೆಗೆ, ಹಿಂದಿನ ಪುಟದಲ್ಲಿ ವಿನ್ಯಾಸದ ಕಡೆಗೆ ನೋಡುವಾಗ, ನೀವು ಸೈನಿಕರು ಸೇನೆಯ ಬಗ್ಗೆ ಹೊಂದಿರುವ ಪ್ರಾಮಾಣಿಕತೆಯನ್ನು ದೂರ ಮಾಡಲು ಬಯಸಿದಲ್ಲಿ, ಹಿಂದಿನ ಯಶಸ್ವೀ ಚಳವಳಿಗಳಲ್ಲಿ ಅವರ ಜೊತೆಗೆ ರಸ್ತೆಗಳಲ್ಲಿ ಮಾತನಾಡುವ ಮೂಲಕ ನಡೆದಿರುತ್ತದೆ, ಅವರೂ ಸಹ ತಂದೆ, ಮಗ, ಪತಿ ಮತ್ತು ಪ್ರಜೆಗಳೆಂದು ನೆನಪಿಸುವುದು, ಅವರ ರಾಷ್ಟ್ರಭಕ್ತಿಯ ಪ್ರಜ್ಞೆಯನ್ನು ಎಬ್ಬಿಸಲು ಪ್ರಯತ್ನಿಸುವುದು, ಮತ್ತು ಅವರಿಗೆ ಈಗಿನ ಆಡಳಿತಕ್ಕಿಂತ ವಿರೋಧ ಪಕ್ಷದ ನೇತೃತ್ವದ ಸಮಾಜವು ಅವರಿಗೆ ಮತ್ತು ಅವರ ಕುಟುಂಬಕ್ಕೆ ಒಳಿತುಂಟು ಮಾಡಲಿದೆ ಎನ್ನುವ ಭರವಸೆ ನೀಡುವುದು. ಈ ರೀತಿಯ ನಡವಳಿಕೆಯು ಸೈನಿಕರು ತಮ್ಮ ಕಂಬದಿಂದ ದೂರ ಹೋಗುವಂತೆ ಮಾಡುತ್ತದೆ ಮತ್ತು ವಿಪಕ್ಷದ ಕಡೆಗೆ ಅವರನ್ನು ಸೆಳೆಯುತ್ತದೆ. ಅದಕ್ಕೆ ಬದಲಾಗಿ ನಗರಗಳಲ್ಲಿ ಸೈನಿಕರನ್ನು ಬೆದರಿಸುವ ಚಳವಳಿಗಳು ಮತ್ತು ಕಲ್ಲುಗಳನ್ನು ಎಸೆದು ಮಾಡುವ ಹಿಂಸಾತ್ಮಕ ಕೃತ್ಯಗಳು ಅವರನ್ನು ಕಂಬದ ಬಳಿಗೆ ಇನ್ನಷ್ಟು ದೂಡುತ್ತದೆ. ಇದೇ ಕಾರಣದಿಂದ ಕೆಲವು ದೌರ್ಜನ್ಯಾತ್ಮಕ ಸರ್ಕಾರಗಳು ವಿರೋಧ ಪಕ್ಷಗಳಿಂದ ಹಿಂಸಾತ್ಮಕ ಹೋರಾಟವನ್ನು ಪ್ರಚೋದಿಸುವಂತೆ ಮಾಡುತ್ತದೆ. ಏಕೆಂದರೆ ಇದರಿಂದ ಸೈನಿಕರು ತಮಗೆ ಇನ್ನೂ ಹತ್ತಿರವಾಗುತ್ತದೆ ಎನ್ನುವುದು ಅವರಿಗೆ ತಿಳಿದಿದೆ ಮತ್ತು ಸೈನಿಕರು ಆಡಳಿತದ ಆದೇಶಗಳನ್ನು ಹೆಚ್ಚು ನಿಯತ್ತಿನಿಂದ ಪಾಲಿಸುತ್ತಾರೆ.

**SPO 3:** ಪ್ರತೀ ಕಂಬದಿಂದ ವ್ಯಯಿಸಿರುವ ಶಕ್ತಿಯನ್ನು ವ್ಯಾಖ್ಯಾನಿಸಿ ಮತ್ತು ಪ್ರತೀ ಕಂಬದ ಪ್ರಾಮುಖ್ಯತೆ ಸಮಾಜದಲ್ಲಿ ಏನಿದೆ ಎನ್ನುವ ಮಟ್ಟವನ್ನು ಅಂದಾಜಿಸಿ.

ಈ ವಿಭಾಗದಲ್ಲಿ, ನಾವು ಹಲವು ಸಾಮಾನ್ಯ ಬೆಂಬಲದ ಕಂಬಗಳ ಸಾಮಾನ್ಯ ಅಂಶಗಳನ್ನು ವಿಶ್ಲೇಷಿಸಲಿದ್ದೇವೆ.